## ಕುಳಿತಲ್ಲೇ ಅಡ್ಮಿಷನ್

‘ಇಗ್ನೋ’ ರಾಜ್ಯದ ವಿಜಯಪುರ ಮತ್ತು ಬೆಂಗಳೂರಿನಲ್ಲಿ ಪ್ರಾದೇಶಿಕ ಕೇಂದ್ರವನ್ನು ಹೊಂದಿದೆ. ಒಟ್ಟು 2000 ಶೈಕ್ಷಣಿಕ ವಿಭಾಗಗಳಿವೆ. ಆಸಕ್ತರು ಅಧ್ಯಯನಕ್ಕೆ ಕೇಂದ್ರಕ್ಕೆ ಹೋಗದೆ ಆನ್‌ಲೈನ್‌ನಲ್ಲಿಯೇ ದಾಖಲಾತಿ ಪಡೆಯಬಹುದು. ಅಗತ್ಯ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕು. ಶುಲ್ಕವನ್ನೂ ಕೂಡ ಆನ್‌ಲೈನ್ ಮಾಡಬಹುದು, ಇಲ್ಲವೆ ಬ್ಯಾಂಕ್‌ಗೆ ಪಾವತಿಸಿ ಚಲನ್ ಪ್ರತಿಯನ್ನು ಅಪ್‌ಲೋಡ್ ಮಾಡಬೇಕು. ವಿದ್ಯಾರ್ಥಿಗಳ ಗುರುತಿನ ಪತ್ರ–ಪರೀಕ್ಷಾಪತ್ರಗಳೆಲ್ಲವನ್ನೂ ಆನ್‌ಲೈನ್‌ನಲ್ಲಿಯೇ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ: ignou.ac.in ಅಥವಾ rcbangalore@ignou.ac.in ಸಂಪರ್ಕ: 08026654747

ತೆರೆಯಬೇಕು ಎನ್ನುವವರಿಗೆ ‘ಸ್ಕೂಲ್ ಮ್ಯಾನೇಜ್‌ಮೆಂಟ್ ಅಂಡ್ ಲೀಡರ್‌ಶಿಪ್’ ಡಿಪ್ಲೊಮಾ ಇದೆ. ಇದನ್ನು ಅಧ್ಯಯನ ಮಾಡುವುದರಿಂದ ಒಂದು ಶಾಲೆಯ ಸ್ಥಾಪನೆ, ಅದಕ್ಕೆ ಬೇಕಾಗುವ ಮೂಲಭೂತ ಸೌಲಭ್ಯಗಳೂ ಸೇರಿದಂತೆ ಆಕರ್ಷಣೀಯ ವಿನ್ಯಾಸ ಮಾಡುವ ತಿಳಿವಳಿಕೆಯನ್ನು ಗಳಿಸಬಹುದು.

ಪದವಿ ಎಂದು ಯಾವುದ್ಯಾವುದನ್ನೋ ತೆಗೆದುಕೊಂಡು ಏನು ಪ್ರಯೋಜನ? ನೌಕರಿಗೆ ನೆರವಾಗಬೇಕು. ನಾಲ್ಕು ಕಾಸು ಸಂಪಾದನೆಗೆ ಅದು ಮಾರ್ಗ ಆಗಬೇಕು. ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಪ್ರತಿಷ್ಠೆಗೆ ಇದ್ದರೆ ಸಾಕು ಎಂದುಕೊಂಡರೂ ಅಡ್ಡಿ ಇಲ್ಲ. ಅವರವರ ಅಭಿರುಚಿಗೆ ತಕ್ಕ ಅಧ್ಯಯನಗಳು ಇಲ್ಲಿ ಲಭ್ಯ. ತತ್ವಶಾಸ್ತ್ರ, ಸಿದ್ಧಾಂತ, ವಿಜ್ಞಾನ, ಪರಿಸರ, ಆಹಾರ, ಪ್ರವಾಸ, ಸಮಾಜಕಾರ್ಯ, ವೈದ್ಯಕೀಯ, ಕಾನೂನು, ಎಂಜಿನಿಯರಿಂಗ್, ತಂತ್ರಜ್ಞಾನ, ಮಾನವಹಕ್ಕುಗಳು ರಕ್ಷಣೆ, ಸಹಕಾರ, ಮಹಿಳಾ ಅಧ್ಯಯನ, ತಾಂತ್ರಿಕ ಶಿಕ್ಷಣ, ವ್ಯವಸ್ಥಾಪನಾ ಅಧ್ಯಯನಗಳು ಹೀಗೆ ಹತ್ತಾರು ಜ್ಞಾನ ಶಾಖೆಯ ನೂರಾರು ಕೋರ್ಸ್‌ಗಳು ಇಲ್ಲಿ ಆಸಕ್ತರಿಗೆ ಲಭ್ಯ.



‘ಉದ್ಯೋಗಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಪದೋನ್ನತಿ ಅರ್ಹತೆಗೆ, ಸುಧಾರಿತ ಕೌಶಲ್ಯ ಅಭಿವೃದ್ಧಿಗೆ, ಉನ್ನತಶಿಕ್ಷಣಕ್ಕೆ ಹೀಗೆ ಕಾರಣ ಏನೇ ಇರಬಹುದು ಒಟ್ಟಾರೆ ಉನ್ನತ ಶಿಕ್ಷಣ ವಂಚಿತರಿಗೆ ತಮ್ಮ ಇಚ್ಛೆಯ ಪದವಿಗಳಿಸಲು ಇಗ್ನೋ ಸುವರ್ಣ ಅವಕಾಶವನ್ನು ಕಲ್ಪಿಸಿದೆ. ಇಗ್ನೋ ಎನ್ನುವುದು ಜನತಾ ವಿಶ್ವವಿದ್ಯಾಲಯ. ದೇಶದ 100 ಜೈಲುಗಳಲ್ಲಿ ಇಗ್ನೋ ತನ್ನ ಅಧ್ಯಯನ ಕೇಂದ್ರವನ್ನು ತೆರೆದಿದೆ. ಕರ್ನಾಟಕದಲ್ಲಿ ಅಂತಹ ಒಂದೇ ಒಂದು ಕೇಂದ್ರವನ್ನು ತೆರೆಯಲು ಆಗಿಲ್ಲ. ರಾಜ್ಯದ ಎಲ್ಲ ಕಾರಾಗೃಹಗಳಿಗೆ ಪತ್ರವನ್ನು ಬರೆದು ಅಧ್ಯಯನ ಕೇಂದ್ರಕ್ಕೆ ಅವಕಾಶವನ್ನು ಕೂರಲಾಗಿತ್ತು. ಆದರೆ ಅಂತಹ ಪೂರಕ ಪ್ರತಿಕ್ರಿಯೆ ಬಂದಿಲ್ಲ.

—ಡಾ. ವಿ. ವೇಣುಗೋಪಾಲ್, ‘ಇಗ್ನೋ’ದ ಬೆಂಗಳೂರು ಪ್ರಾದೇಶಿಕ ಕೇಂದ್ರದ ಹಿರಿಯ ನಿರ್ದೇಶಕ

### ಹೈಸ್ಕೂಲೂ ಓದಿಲ್ಲ: ಆದರೂ ಪದವೀಧರರಾಗಬಹುದು!

ಕುಳಿತು ಓದಿದರೆ ನಿಗದಿತ ಅವಧಿಯೊಳಗೆ ಬೇಕಾಗುವ ಪದವಿ ಪಡೆಯಬಹುದು. ಓದು–ಬರಹ ಗೊತ್ತಿದ್ದರೆ ಡಿಗ್ರಿಯನ್ನೇ ತೆಗೆದುಕೊಳ್ಳಬಹುದು. ಬಾಲ್ಯದಲ್ಲಿ ಶಾಲೆಗೆ ಹೋಗದಿದ್ದರೆ ಏನಂತೆ? ಓದಲು ಬರೆಯಲು ಬಂದರೆ ವಯಸ್ಸು ಲಿಂಗದ ತಾರತಮ್ಯ ಇಲ್ಲದೆ ಯಾರಾದರೂ ಪದವಿ, ಸ್ನಾತಕೋತ್ತರ ಪದವಿ, ಡಾಕ್ಟರೇಟ್ ಪದವಿಯನ್ನೂ ಪಡೆಯಬಹುದು. ಹಿಂದೆಂದೋ ಶಾಲೆ ಬಿಟ್ಟ ತಪ್ಪಿನ ಲೆಕ್ಕಾಚಾರಕ್ಕೆ ಶಪಿಸಿಕೊಳ್ಳುವ ಅಗತ್ಯವೂ ಇಲ್ಲ. ಕನಿಷ್ಠ ಎಸ್ಸೆಸ್ಸೆಲ್ಸಿ ಓದದಿದ್ದರೂ ‘ಇಗ್ನೋ’ ಮೂಲಕ ಪದವಿಯನ್ನು ಪಡೆಯಬಹುದು. ಅದಕ್ಕಾಗಿ ಬಿಪಿಪಿ (Bachelor Preparatory Programme ‘BPP’) ಎಂಬ ಕಾರ್ಯಕ್ರಮವನ್ನು ಯೂನಿವರ್ಸಿಟಿ ರೂಪಿಸಿದೆ. ಆರು ತಿಂಗಳ ಪದವಿ ಪೂರ್ವಸಿದ್ಧತಾ ಪರೀಕ್ಷೆಯ ತೇರ್ಗಡೆಯಾಗುವ ಮೂಲಕ ನೇರವಾಗಿ ಪದವಿಗೆ ಪ್ರವೇಶ ಪಡೆಯಬಹುದು. ಕನಿಷ್ಠ ಖರ್ಚಿನಲ್ಲಿ ಉತ್ತಮ ಶಿಕ್ಷಣವನ್ನು ಪಡೆಯಬಹುದು. ಇದೊಂದು ಜನಪ್ರಿಯ ಯೋಜನೆಯಾಗಿದ್ದು, ಶಾಲಾ ಶಿಕ್ಷಣದಿಂದ ವಂಚಿತರಾದ ಅನೇಕರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ವಿಜ್ಞಾನವನ್ನು ಹೊರತುಪಡಿಸಿ ಬಿ.ಎ., ಬಿ.ಕಾಂ. ಪದವಿ ಗಳಿಸಬಹುದು.

ಗೃಹಿಣಿಯೊಬ್ಬಳು ತನ್ನ ಗೃಹ ಕೃತ್ಯದಲ್ಲಿಯೇ ತನ್ನ ಜೀವನ ಕಳೆಯುವ ಅನಿವಾರ್ಯತೆ ಈಗಂತೂ ಇಲ್ಲ. ಆಕೆ ಮನಸು ಮಾಡಿದರೆ ಯಾವ ಸಮಯದಲ್ಲಾದರೂ ಸಂಪಾದನೆಯ ಮಾರ್ಗಗಳನ್ನು ಕಂಡುಕೊಳ್ಳಬಹುದು. ಯಾವುದೋ ಕಾರಣಕ್ಕೆ ಕಾರಾಗೃಹದ ಹಾದಿ ತುಳಿದ ಅನೇಕರು ಶಿಕ್ಷಾ ಅವಧಿ ಪೂರೈಸಿದ ನಂತರದ ಬದುಕು ಕಲ್ಪಿಸಿಕೊಂಡರೂ ಅವರಿಗೆ ನಿದ್ದೆ ಬರದು. ಅಂತಹ ತಲ್ಲಣದಲ್ಲಿ ತಮ್ಮ ಶಿಕ್ಷೆಯನ್ನು ಅನುಭವಿಸುವಾಗ ಅವರಿಗೆ ಯಾವ ಯೋಜನೆ ಇರಲು ಸಾಧ್ಯ? ಅವರ ಸ್ವತಂತ್ರ ಜೀವನ ನಿರ್ವಹಣೆಗೆ ಅನುಕೂಲವಾಗುವ ಶಿಕ್ಷಣವನ್ನು ಜೈಲಿನಲ್ಲಿ ಇದ್ದೇ ಪಡೆಯಬಹದು. ಅದೂ ಸಂಪೂರ್ಣ ಉಚಿತವಾಗಿ.

### ನೌಕರಿಗಾಗಿ ಹೊಸ ಕೋರ್ಸ್

ಇಗ್ನೋ, ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಹೊಸ ನಾಲ್ಕು ಕೌಶಲ್ಯ ಆಧಾರಿತ ಆರೋಗ್ಯ ಸೇವೆಗೆ ಸಂಬಂಧಿಸಿದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಿದೆ. ಈ ವಿಭಾಗದಲ್ಲಿ ಅಧ್ಯಯನ ಮಾಡಿದರೆ ದೇಶವ್ಯಾಪಿ ಎಲ್ಲಾದರೂ ಉದ್ಯೋಗವನ್ನು ಪಡೆಯಬಹದು. ಕೋರ್ಸ್‌ಗೆ ಸೇರಿದ ಸಂದರ್ಭದಲ್ಲಿಯೇ ಸೂಕ್ತ ಪ್ರಾಯೋಗಿಕ ತರಬೇತಿಯನ್ನೂ ನೀಡಲಾಗುತ್ತದೆ. ಈ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪಿಯುಸಿ / 12ನೇ ತರಗತಿಯಲ್ಲಿ ಜೀವಶಾಸ್ತ್ರ ಓದಿದವರು ಪ್ರವೇಶ ಪಡೆಯಬಹುದು.

### ವೈದ್ಯರ ವೃತ್ತಿ ಬದಲು

ನಗರ ಪ್ರದೇಶಗಳಲ್ಲಿ ವೈದ್ಯರೂ ದಂತ ವೈದ್ಯರೂ ಮನೋವಿಜ್ಞಾನ ಸಂಬಂಧಿ ವಿಭಾಗದ ಅಧ್ಯಯನಕ್ಕೆ ದಾಖಲಾಗುತ್ತಿದ್ದಾರೆ. ತಮ್ಮ ವೃತ್ತಿಯಲ್ಲಿ ಸಿಗದ ತೃಪ್ತಿಯನ್ನು ಪಡೆಯಲು ಅವರು ಇಲ್ಲಿಗೆ ಬರುತ್ತಿದ್ದಾರೆ. ಆ ಮೂಲಕ ಆಪ್ತಸಮಾಲೋಚನೆ ಮಾಡುವ ಶೈಕ್ಷಣಿಕ ಅರ್ಹತೆಯನ್ನು ಪಡೆಯುತ್ತಾರೆ. ಅದರ ಆಧಾರದ ಮೇಲೆಯೇ ಹೊಸ ವೃತ್ತಿಯ ಅವಕಾಶವನ್ನೂ ಪಡೆಯುತ್ತಾರೆ. ಇಗ್ನೋದಲ್ಲಿ ಮನೋವಿಜ್ಞಾನ ಪದವಿಗೆ ಹೆಚ್ಚು ಮಂದಿ ದಾಖಲಾತಿಯನ್ನು ಪಡೆಯುತ್ತಿದ್ದಾರೆ.

ಸಿವಿಲ್ ಎಂಜಿನಿಯರಿಂಗ್ ಓದಿದ ಯುವಕರು ತಮ್ಮ ವೃತ್ತಿ ಜೀವನದ ಯಶಸ್ಸಿಗೆ ‘ನಗರ ಯೋಜನೆ ಮತ್ತು ಅಭಿವೃದ್ಧಿ’ ಎಂಬ ಡಿಪ್ಲೊಮಾ ಕೋರ್ಸ್‌ಗೆ ಸೇರುತ್ತಿದ್ದಾರೆ. ಇದರಲ್ಲಿ ನವನಗರ ನಿರ್ಮಾಣದ ಸ್ಪಷ್ಟ ಕಲ್ಪನೆ ಅವರಿಗೆ ಬರುತ್ತದೆ. ನಾಲ್ಕು ವರ್ಷಗಳ ಕಾಲ ಪದವಿಯಲ್ಲಿ ಪಡೆಯಲು ಆಗದ ಕೌಶಲ್ಯವನ್ನು ಆರು ತಿಂಗಳಲ್ಲಿ ಇಲ್ಲಿ ಪಡೆಯಬಹುದು.

### ಯುಪಿಎಸ್‌ಸಿಗೆ ಮಾದರಿ ಪಠ್ಯ

ವಿವಿಧ ಶಿಸ್ತಿನ ಅಧ್ಯಯನ ಮಾಡಿದ ಅನೇಕರು ಐಎಎಸ್ ಮಾಡಬೇಕೆಂಬ ಕನಸು ಕಟ್ಟಿಕೊಂಡಿರುತ್ತಾರೆ. ರಾಷ್ಟ್ರೀಯ ಏಕರೂಪ ಪಠ್ಯ ಇಗ್ನೋದಲ್ಲಿ ಲಭ್ಯ ಇರುವುದರಿಂದ ತಮ್ಮ ಐಚ್ಛಿಕ ವಿಷಯ ಆಯ್ಕೆ ಮಾಡಿ ಇಲ್ಲಿ ಅಧ್ಯಯನ ಮಾಡುತ್ತಾರೆ. ಇದರಿಂದ ಅವರಿಗೆ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ಆಗಲು ಅನುಕೂಲವಾಗುವ ಪಠ್ಯವೂ ಸಿಗುತ್ತದೆ. ಜೊತೆಗೆ ಒಂದು ಪದವಿ ಕೂಡ.

ಜ್ಞಾನದೀಪ್–ಆಕಾಶದೀಪ್: ಸೈನಿಕರಿಗಾಗಿ ವಿಶೇಷ ಕಾರ್ಯಕ್ರಮ ವಾಯುಸೇನೆಗೆ ‘ಆಕಾಶದೀಪ್’, ಭೂಸೇನೆಗೆ ‘ಜ್ಞಾನದೀಪ್. ಈ ಕಾರ್ಯಕ್ರಮದಡಿ ಅವರ ವೃತ್ತಿ ಅನುಭವಕ್ಕೆ ಪದವಿಯಲ್ಲಿ ಒಂದು ವರ್ಷದ ಕಡಿತ ಆಗುತ್ತದೆ. ಅಂದರೆ ಎರಡೇ ವರ್ಷಕ್ಕೆ ಪದವಿಗಳಿಸಬಹುದು.